ಅ.ದಾ. 108/2024 ಪಿಡಬ್ಲ್ಯೂ-1

ದಿನಾಂಕಃ 23.07.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಸಿ.ಕೆ.ಪಿ. ವಕೀಲರಿಂದ:**

6. ನನ್ನ ತಂದೆಯ ಹೆಸರಿಗೆ ಇದೆ ಎಂದು ಹೇಳಲಾದ ದಾನ ಪತ್ರವನ್ನು ಯಾರು ಮತ್ತು ಯಾವ ದಿನಾಂಕ ಬರೆದುಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆ ದಾನ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಬೊಳ್ಳಚಂಡ ಕುಟುಂಬದಲ್ಲಿ ನಾಲ್ಕು ಪಾಲು ಇದ್ದು, ಮೊದಲನೇಯ ಪಾಲು ಪೂವಯ್ಯ, 2ನೇ ಪಾಲು ಕಾರ್ಯಾಪ್ಪ, 3ನೇ ಪಾಲು ಮಂದಪ್ಪ ಮತ್ತು 4ನೇ ಪಾಲು ಸೋಮಯ್ಯರವದ್ದಾಗಿದೆ. ನಾನು ಮತ್ತು ಇತರೆ ವಾದಿಗಳು ಕಾರ್ಯಪ್ಪ ರವರ ಪಾಲಿಗೆ ಸೇರಿದವರು. ಬೊಳ್ಳಚಂಡ ಕುಟುಂಬದವರ ವಂಶ ವೃಕ್ಷವನ್ನು ಹಾಜರು ಪಡಿಸಿದ್ದೇನೆ. ಐಮಂಗಲ ಗ್ರಾಮದ ಸರ್ವೆ ನಂಬರ್ 68 ರಲ್ಲಿ ಕೆರೆ ಇದೆ. ಬೊಳ್ಳಚಂಡ ಕುಟುಂಬದ ವಿಭಾಗದಲ್ಲಿ ಯಾರ ಯಾರ ಪಾಲಿಗೆ ಯಾವ ಸರ್ವೆ ನಂಬರ್ ಜಮೀನು ನೀಡಲಾಗಿದೆ ಎಂದು ವಿವರವಾಗಿ ಹೇಳಲಾಗುವುದಿಲ್ಲ. ಪ್ರತಿವಾದಿಗೆ ಸರ್ವೆ ನಂ.95 ರಲ್ಲಿ ಆಸ್ತಿ ಇದೆ ಎಂದರೆ ಸರಿ. ನಾನು ಹೇಳುತ್ತಿರುವ ಕೆರೆ ಸರ್ವೆ ನಂ.95 ರಲ್ಲಿ ಇದೆ ಎಂದರೆ ಸರಿ.

7. ಸರ್ವೆ ನಂ.95 ನ್ನು ಪ್ರತಿವಾದಿಯೇ ಅಭಿವೃದ್ಧಿ ಪಡಿಸಿ ಕಳೆದ 10-20 ವರ್ಷಗಳಿಂದ ಕೃಷಿ ಮಾಡುತ್ತಿದ್ದಾರೆ ಎಂದರೆ ಸರಿ. ಕೆರೆಯ ಜಾಗಕ್ಕೆ ಪ್ರತ್ಯೇಕ ಪಹಣಿಯನ್ನು ಮಾಡಿಲ್ಲ. ಯಾವ ದಿನಾಂಕದಂದು ನಮ್ಮ ದಾರಿಯ ಹಕ್ಕಿಗೆ ಅಡಚಣೆ ಮಾಡಿದ್ದಾರೆ ಎಂದು ವಾದ ಪತ್ರದಲ್ಲಿ ಹೇಳಿಲ್ಲ. ಸದರಿ ಅಡಚಣೆಯ ಸಂಬಂಧ ನಾನು ಪೊಲೀಸರಿಗೆ ದೂರು ನೀಡಿದ್ದೆ. ದೂರು ನೀಡಿದ್ದ ದಿನಾಂಕ ನನಗೆ ಗೊತ್ತಿಲ್ಲ. ಆದರೆ ದೂರನ್ನು 2 ವರ್ಷದ ಹಿಂದೆ ಕೊಟ್ಟಿದೆ. ಆ ದೂರಿನ ಅನ್ವಯ ನನ್ನನ್ನು ಮತ್ತು ಪ್ರತಿವಾದಿಯನ್ನು ಕರೆಸಿ ವಿಚಾರಣೆ ಮಾಡಿಲ್ಲ. ಆ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಆ ರೀತಿ ನಾನು ಯಾವುದೇ ದೂರಿನ ಪ್ರತಿಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಕೆರೆ ಮತ್ತು ಆಸ್ತಿಯ ವಿಚಾರವಾಗಿ ನಾನು 2 ಬಾರಿ ತಹಶೀಲ್ದಾರರಿಗೆ ದೂರು ನೀಡಿದ್ದೆ. ಸದರಿ ದೂರಿನ ಅನ್ವಯ ತಹಶೀಲ್ದಾರರು ವಿಚಾರಣೆ ನಡೆಸಿದ್ದರು. ಈ ಸಂಬಂಧ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಕೆರೆಯ ವಿಷಯವಾಗಿ ನಾನು ಪಿ.ಡಿ.ಒ ರವರಿಗೊ ಸಹ ದೂರು ನೀಡಿದ್ದು, ಅವರು ವಿಚಾರಣೆ ಮಾಡಿಲ್ಲ ಹಾಗೂ ಯಾವುದೇ ಕ್ರಮ ತೆಗೆದುಕೆಂಡಿಲ್ಲ. ಪಿ.ಡಿ.ಒ ರವರಿಗೆ ಕೊಟ್ಟ ದೂರಿನ ಪ್ರತಿಯನ್ನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ.

8. ಬೊಳ್ಳಚಂಡ ಪ್ರಕಾಶ್ ರವರ ಪರಿಚಯ ನನಗಿದ್ದು, ನಾವು ಅನ್ಯೋನ್ಯ ವಾಗಿದ್ದೆವೆ. ಬೊಳ್ಳಚಂಡ ಕುಟುಂಬದ ಮೂರು ಭಾಗದವರು ಪ್ರತಿವಾದಿಯನ್ನು ಬಹಿಷ್ಕಾರ ಇಟ್ಟ ಬಗ್ಗೆ ಪ್ರತಿವಾದಿಯು ದೂರು ನೀಡಿದ್ದು, ವಿಚಾರಣೆ ಆಗಿದೆ ಎಂದರೆ ಸರಿ. ಈ ಸಂಬಂಧ ಪೊಲೀಸರು ನನ್ನ ಹೇಳಿಕೆ ಪಡೆದಿದ್ದಾರೆ ಎಂದರೆ ಸರಿ. ಪ್ರತಿವಾದಿಗೆ ಸೇರಿದ ಸರ್ವೆ ನಂ.95 ರ ಜಮೀನಿಗೆ ತೊಂದರೆ ನೀಡುತ್ತಿದೇವೆ ಎಂದು ಪ್ರತಿವಾದಿ ನಮ್ಮ ವಿರುದ್ಧ ಅಸಲು ದಾವೆ ಸಂಖ್ಯೆ 98/2023 ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ನಾನು ಪ್ರಕಾಶ್ ರವರೊಂದಿಗೆ ಸೇರಿ ಪ್ರತಿವಾದಿಯ ಜಮೀನಿಗೆ ಹೋಗಿ

ಕಾಫೀ ಗಿಡಗಳನ್ನು ಹಾಳು ಮಾಡಿ ತೊಂದರೆ ಕೊಡುತ್ತಿದ್ದೆವು ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ನಿಪಿ-3 ರಿಂದ 8 ರ ದಾಖಲೆಗಳು ಸೃಷ್ಟಿತ ದಾಖಲೆಗಳು ಎಂದರೆ ಸರಿಯಲ್ಲ. ನಿಪಿ-4 ಕ್ಕೆ ಸಂಬಂಧ ಪಟ್ಟ ಮುಟೇಶ್ ಪ್ರತಿ, ಆಕಾರ್ ಬನ್ ಮತ್ತು ನಕ್ಷೆಯನ್ನು ಹಾಜರುಪಡಿಸಿದ್ದೇನೆ. ಈ ರೀತಿ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ-5 ರಿಂದ 8 ರ ಫೋಟೊಗಳಲ್ಲಿ ಸರ್ವೆ ನಂಬರ್ ಮತ್ತು ದಿನಾಂಕ ಕಾಣುತ್ತಿಲ್ಲ ಎಂದರೆ ಸರಿಯಲ್ಲ. ಸದರಿ ಫೋಟೊಗಳು ದಾವಾ ಜಮೀನಿಗೆ ಸಂಬಂಧ ಪಟ್ಟದಲ್ಲ ಎಂದರೆ ಸರಿಯಲ್ಲ.

9. ನಿಪಿ-9 ನ್ನು ಸೈಬರ್ ಸೆಂಟರ್ ನಲ್ಲಿ ಮಾಡಿಸಿದ್ದೇನೆ. ಆ ಸಿ.ಡಿ. ಯಲ್ಲಿ ಹಳೆಯ ಕೆರೆಯ ಫೋಟೊಗಳು ಇವೆ. ನಿಪಿ-10 ರಲ್ಲಿ ಸರ್ವೆ ನಂ.95 ನ್ನು ಗುರುತಿಸಲಾಗುತ್ತದೆ ಎಂದರೆ ಸಾಕ್ಷಿಯು ನನಗೆ ಕಾಣುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗೆ ಸೇರಿದ ಜಮೀನನ್ನು ಕಬಳಿಸುವ ಉದ್ದೇಶದಿಂದ ಹಾಗೂ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನು ಪ್ರತಿವಾದಿಯ ಸ್ವಾಧೀನದಲ್ಲಿದೆ ಎಂದರೆ ಸರಿ. ನನ್ನ ತಂದೆ 2005 ನೇ ಇಸವಿಯಲ್ಲಿ ಮೃತರಾದರು. ದಾವಾ ಜಮೀನಿನ ಪಹಣಿಯನ್ನು ನನ್ನ ಹೆಸರಿಗೆ ಮಾಡಿಕೊಳ್ಳು ವಷ್ಟರಲ್ಲಿ ಪ್ರತಿವಾದಿ ತೊಂದರೆ ಮಾಡಿದ್ದಾರೆ. ದಾವಾ ಜಮೀನಿನ ಪಹಣಿಯಲ್ಲಿ ನನ್ನ ತಂದೆಯ ಹೆಸರು ಪಟ್ಟೆದಾರಿಕೆ ಆಧಾರದ ಮೇಲೆ ಇದೆ ಎಂದರೆ ಸರಿ. ಈ ಕಾರಣ ಸದರಿ ಜಮೀನಿನ ಮೇಲೆ ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ವಿರಾಜಪೇಟೆ.